ಅಥವಾ ಸ್ಥಳೀಯ ಭಾಷೆಯಲ್ಲೇ (ಇಲ್ಲಿ ಕನ್ನಡ) ಪದಮೂಲವನ್ನು (ವ್ಯುತ್ಪತ್ತಿಯನ್ನು, ನಿಷ್ಪತ್ತಿಯನ್ನು) ಅರಸಬೇಕಿದೆ. ಉದಾ:ಗೆ– ಒಕ್ಕಲಿಗ\ಒಕ್ಕಲಗಿತ್ತಿ, ಗಾಣಿಗ\ಗಾಣಿಗಿತ್ತಿ, ತೊರೆಯ\ತೊರ್ತಿ, ಕೆಲಸಿಗ\ಕೆಲಸಗಾರ್ತಿ\ಕೆಲಸಗಿತ್ತಿ, ಕುರುಬ\ಕುರುಬ್ತಿ\ಕುರುಬಗಿತ್ತಿ, ಹೊಲೆಯ\ಹೊಲತಿ, ಮಾದಿಗ\ಮಾದಿಗಿತ್ತಿ, ಉಪ್ಪಲಿಗ\ಉಪ್ಪಾರ್ತಿ\ಉಪ್ಪಲಗಿತ್ತಿ, ನೇಕಾರ\ನೇಕಾರ್ತಿ\ನೇಕಾರಗಿತ್ತಿ, ಅಗಸ\ಅಗಸಗಿತ್ತಿ, ಗೆಜ್ಜಗಾರ\ಗೆಜ್ಜಗಾರ್ತಿ\ಗೆಜ್ಜಗಿತ್ತಿ, ಕಬ್ಬಲಿಗ\ಕಬ್ಬಲಗಿತ್ತಿ, ಯರವ\ಯರವತಿ, ಹೆಗ್ಗಡೆ\ಹೆಗ್ಗಡಿತಿ, ಈಡಿಗ\ಈಡಿಗಿತ್ತಿ, ಅಕ್ಕಸಾಲಿಗ\ಅಕ್ಕಸಾಲಿಗಿತ್ತಿ, ಕುಂಬಾರ\ಕುಂಬಾರ್ತಿ\ಕುಂಬಾರಗಿತ್ತಿ, ಹೂಗಾರ\ಹೂಕಾರ್ತಿ\ಹೂಗಿತ್ತಿ, ಸುಣ್ಣಗಾರ\ಸುಣ್ಣಗಾರ್ತಿ, ಬೇಡ\ಬೇಡ್ತಿ ಇತ್ಯಾದಿ. ಈ ಪೈಕಿ ಪ್ರಾದೇಶಿಕವಾಗಿ ಕೆಲವು ವ್ಯತ್ಯಾಸವಿರಬಹುದು. ಈ ಎಲ್ಲವೂ ಕೆಲಸ (ಕಾಯಕ) ಆಧಾರಿತವಾದ ಜಾತಿ ಸೂಚನಾ ಪದಗಳೇ ಆಗಿವೆ. ನಮ್ಮ ದೇಶದ ಬೇರೆ ಬೇರೆ ಪ್ರಾದೇಶಿಕ ಪ್ರಾಂತಗಳಲ್ಲೂ ಇದೇ ಬಗೆಯ ಸಮಾನಾಂತರ ಜಾತಿ ಪ್ರಭೇದಗಳು ಕಂಡುಬರುತ್ತಿದ್ದು, ಭಾಷಾ ವ್ಯತ್ಯಾಸದಿಂದ ಬೇರೆಯಾಗಿ ಕಂಡುಬಂದರೂ ಕಾಯಕದ ದೃಷ್ಟಿಯಿಂದ ಅವುಗಳ ಮೂಲ ಬಹುಪಾಲು ಒಂದೇ ಆಗಿರುತ್ತದೆ. ಹಾಗಾಗಿ, ಅವು ಕೂಡ ಮೂಲದಲ್ಲಿ ದ್ರಾವಿಡ ಅಥವಾ ಆರ್ಯೇತರ ಸಮುದಾಯದೊಳಗಿಂದಲೇ ಜನ್ಯವಾಗಿರುವುದು. ಇದು ಶತಃಸಿದ್ಧ. ಅಂದರೆ, ಆರ್ಯರಿಗೂ, ಸಂಸ್ಕೃತಕ್ಕೂ, ಇವುಗಳಿಗೂ ಸಂಬಂಧ ಏರ್ಪಡುವುದು ತುಂಬ ಕ್ಷೀಣ ಅಥವಾ ಇಲ್ಲವೇ ಇಲ್ಲ, ಅಲ್ಲವೆ? ಹಾಗಾದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ಜಾತಿಗಳ ಬಗ್ಗೆ ಏನು ಹೇಳುತ್ತೀರಿ? ಅಂತ ನಮ್ಮ ದುಂಡಯ್ಯ ಕೇಳುವುದುಂಟು. ಈ ಬಗ್ಗೆ ಕೊಂಚ ತಲೆ ಕೆರೆದುಕೊಳ್ಳಲೇಬೇಕು. ಆದರೆ, ಅದಕ್ಕೂ ಉತ್ತರವಿಲ್ಲದೆ ಇಲ್ಲ. ಕುರುಕ್ಷೇತ್ರ ಯುದ್ಧ ರಂಗದಲ್ಲಿ ಭಗವಾನ್ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ 'ಚಾತುರ್ವರ್ಣಂ ಮಯಾ ಸೃಷ್ಟ್ಯಾ ಗುಣ ಕರ್ಮ ವಿಭಾಗಶಃ' ಎಂದಿರುವನು. ಅಂದರೆ, ವ್ಯಕ್ತಿಯ ಗುಣ ಕರ್ಮಕ್ಕೆ ಅನುಗುಣವಾಗಿ ನಾಲ್ಕು ವರ್ಣಗಳನ್ನು ತಾನು ಸೃಷ್ಟಿ ಮಾಡಿರುವುದಾಗಿ ಭಗವಾನನೇ ಖುದ್ದು ಹೇಳಿದ್ದಾನೆ. ಆ ನಾಲ್ಕು ವರ್ಣಗಳು ಮೂಲದಲ್ಲಿ ಜಾತಿಗಳಾಗದಿದ್ದರೂ ಅವುಗಳ ಮೂಲಕವೇ ನಮ್ಮ ಜಾತಿ ಪದ್ಧತಿಗೆ ನಾಂದಿ ಹಾಡಲಾಯಿತು ಅಂತ ನಾವಾದರೂ ಭಾವಿಸಬಹುದು. ಆದರೆ, ಕ್ರಮೇಣ ಜನರ ದಿನಬಳಕೆ ನುಡಿಯಲ್ಲಿ ಅವು ಕೂಡ ಜಾತಿಗಳಾಗಿ ಪರಿವರ್ತನೆಗೊಂಡಿವೆ. ಅವುಗಳ ಕನ್ನಡೀಕರಣವೂ ಆಗಿದೆ. ನೋಡಿ–ಬ್ರಾಹ್ಮಣ=ಪಾರ್ವ=ಹಾರ್ವ=ಶ್ರೇಷ್ಠನಾದವನು, (ವೈಶ್ಯ)ಶ್ರೇಷ್ಠಿ=ಶೆಟ್ಟಿ, ಕ್ಷತ್ರಿಯ ಎಂಬ ವರ್ಣವು ಕ್ಷತ್ರಿಯರಾದ ರಾಜ ಅಥವಾ ಅರಸ, ರಜಪೂತ ಮೊದಲಾದವರು ಮತ್ತು ಶೂದ್ರ ಎಂಬ ವರ್ಣವು ಇಡೀ ದುಡಿಮೆ ಸಮೂಹಕ್ಕೆ ಅನ್ವಯಿಸುತ್ತದೆ. ಈ ಪದಕ್ಕೆ ಸಮಾನ ಪದವು ಕನ್ನಡದಲ್ಲಾಗಲಿ ಅಥವಾ ಇತರ ದ್ರಾವಿಡ ಭಾಷೆಯಲ್ಲಾಗಲಿ ಲಭ್ಯವಾಗುವುದಿಲ್ಲ. ದ್ರಾವಿಡ ಜನಾಂಗದ ಎಲ್ಲ ಕಾಯಕಾಧಾರಿತವಾದ ಜಾತಿಗಳೂ ಈ ಗುಂಪಿಗೇ ಸೇರುತ್ತವೆ. ಇದು ವಾಸ್ತವಿಕ ವಿರೋಧಾಭಾಸ. ಬರೀ ಇಷ್ಟೇ ಕಾರಣವೊ? ಹಾಗಾದರೆ, ಬೇರೇನೂ ಇಲ್ಲವೆ? ಅಂತ ನನ್ನ ಗೆಳೆಯ ವಡ್ಡರ ಮಹದೇವ ಒಮ್ಮೆ ಕೇಳಿದ್ದುಂಟು. ಅವನ ಪ್ರಶ್ನೆಯೂ ಅರ್ಥಪೂರ್ಣವಾದುದೆಂದು ಕ್ರಮೇಣ ನನಗೆ ಗೊತ್ತಾಯಿತು. ಏನಂತಿರೊ? ಬಹುಶಃ, ಆರ್ಯ ಜನಾಂಗದ ಗುಣ, ಕರ್ಮ ವಿಭಜನೆಯ ವರ್ಣಾಶ್ರಮ ವ್ಯವಸ್ಥೆಯಿಂದ ಪ್ರಭಾವಿತರಾದ ದ್ರಾವಿಡ ಜನಾಂಗ, ಕಸುಬಾಧಾರಿತ ಗುಂಪಾಗಿ ತನ್ನನ್ನು ಈ ರೀತಿ ಜಾತಿಯನ್ನಾಗಿ ಮಾರ್ಪಡಿಸಿಕೊಂಡಿರಬಹುದೆಂದು ನನ್ನ ತಿಳಿವಳಿಕೆ. ನಿಮ್ಮ ತಿಳಿವಳಿಕೆ ಹೇಗಿದೆಯೊ? ಯಾಕೆಂದರೆ, 'ಲೋಕೊ ಭಿನ್ನ ರುಚಿಃ' ಅನ್ನುವ ಹಾಗೆ 'ಲೋಕೊ ಅಭಿಪ್ರಾಯ ಭೇದಃ'ವೂ ಇದೆಯಲ್ಲ?

ಜಾತಿಯ ವಿಷಯಕ್ಕೆ ಬಂದಾಗ ಬಹಳಷ್ಟು ಜನ ಭಾವೋದ್ರೇಕಕ್ಕೆ ಒಳಗಾಗುವುದುಂಟು. ಇದಕ್ಕೆ ಕಾರಣ ಆ ಕುರಿತು ಸ್ಪಷ್ಟ ತಿಳಿವಳಿಕೆ ಇಲ್ಲದಿರುವುದು ಮಾತ್ರವಲ್ಲ, ತಮ್ಮ ಅಸ್ಮಿತೆಗೆ ಎಲ್ಲಿ ಧಕ್ಕೆ